# ಬಾಳಿಗೆ ಬೆಳಕು ನೀಡುವ ದಿವ್ಯತ್ರಯರು

**ಅರುಣ ನಾರಾಯಣ**

> ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ, ಶ್ರೀಮಾತೆ – ಈ ತ್ರಿಮೂರ್ತಿಗಳ ಬದುಕು ಮತ್ತು ಸಂದೇಶ ಎಷ್ಟು ಭೂಮವೋ ಅಷ್ಟೇ ಸರಳವೂ ಅಹುದು. ಗ್ರಹತಾರಾಗರ್ಭಿತವಾಗಿಯೂ ಸರಳಸೌಮ್ಯವಾಗಿಯೂ ತೋರುವ ಹಗಲಿನಾಗಸದಂತೆ, ಅದು ಸರ್ವರಿಗೂ ಸುಲಭಗಮ್ಯ, ಸಾಧು ಮತ್ತು ಸ್ವಾದು. ಅದು ಪೂರ್ಣದೃಷ್ಟಿಯಿಂದ ಕೂಡಿ ಸಮನ್ವಯಲಕ್ಷ್ಮಿಯಿಂದ ಶೋಭಿಸುತ್ತ, ಸರ್ವೋದಯಕ್ಕೆ ತೆರೆದ ಕ್ಷೀರಮಾರ್ಗವಾಗಿದೆ; ತುಷ್ಟಿ ಪುಷ್ಟಿ ಶಾಂತಿಪ್ರದಾಯಕವಾಗಿದೆ. *–ಸಿ.ಪಿ.ಕೆ*

## ರಾಷ್ಟ್ರೀಯ ಆದರ್ಶ

ಶ್ರೀರಾಮಕೃಷ್ಣ ಪರಮಹಂಸರು ೧೯ನೇ ಶತಮಾನದಲ್ಲಿ ಭಾರತದ ಪುಣ್ಯಭೂಮಿಯಲ್ಲಿ ಜನಿಸಿದ ಪುಣ್ಯಪುರುಷ. ಸರ್ವಧರ್ಮ ಸಮನ್ವಯಾಚಾರ್ಯರೆನಿಸಿದ ಈ ಮಹಿಮಾನ್ವಿತರು ತಮ್ಮ ಆರಾಧ್ಯದೈವ ಜಗನ್ಮಾತೆ ಕಾಳಿಕಾದೇವಿಯನ್ನು ಶ್ರದ್ಧೆ–ಭಕ್ತಿಯಿಂದ ಆರಾಧಿಸುವುದರಲ್ಲಿಯೇ ತಮ್ಮ ಆಯುಷ್ಯವನ್ನು ಕಳೆದರು. ಅವರ ಯೌವನದ ವರ್ಷಗಳ ಬಹುಭಾಗ ಕಠೋರ ಆಧ್ಯಾತ್ಮಿಕ ಸಾಧನೆಯಲ್ಲಿ ಕಳೆಯಿತು. ಜೀವನದ ಕೊನೆಯ ಭಾಗದಲ್ಲಿ ಶ್ರೀರಾಮಕೃಷ್ಣರು ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಿರುವ ಸಾಧಕರಿಗೆ, ಶಿಷ್ಯವರ್ಗಕ್ಕೆ ಮಾರ್ಗದರ್ಶನ ಮಾಡಿದರು. ಹೀಗೆ ಶ್ರೀರಾಮಕೃಷ್ಣರು ವಿರಕ್ತಿ ಮತ್ತು ಭಗವಂತನ ಸೇವೆಗಳ ಸರ್ವೋಚ್ಚ ನಿದರ್ಶನವಾಗಿದ್ದರು; ವೈದಿಕ ಯುಗದ ಜೀವನ ಮೌಲ್ಯಗಳ ಸಾಕಾರರೂಪವೆನಿಸಿದ್ದರು. ಸ್ವಾಮಿ ವಿವೇಕಾನಂದರು ತಮ್ಮ ಗುರುದೇವರನ್ನು ಈ ದೃಷ್ಟಿಯಿಂದ ಕಾಣುತ್ತಿದ್ದರು. ಆದುದರಿಂದಲೇ ಅವರು ಶ್ರೀರಾಮಕೃಷ್ಣರನ್ನು **ರಾಷ್ಟ್ರೀಯ ಆದರ್ಶ**ವೆಂದು ಘೋಷಿಸಿದರು.

## ಪ್ರೇಮಮೂರ್ತಿ

"ಭಗವಂತನ ಸಾಕ್ಷಾತ್ಕಾರವೇ ಮನುಷ್ಯ ಜೀವನದ ಪರಮ ಗುರಿ. ನಮ್ಮ ಎಲ್ಲ ಆಲೋಚನೆಗಳು, ಚಟುವಟಿಕೆಗಳು, ಚಿಂತನೆಗಳು ಈ ಸರ್ವೋಚ್ಚ ಗುರಿಯತ್ತ ಕೇಂದ್ರೀಕೃತವಾಗಬೇಕು" ಎಂಬುದು ಶ್ರೀರಾಮಕೃಷ್ಣರ ಬೋಧನೆಗಳ ಜೀವಾಳ ಅಂಶವಾಗಿದೆ. ಭಗವಂತನಲ್ಲಿ ಅಚಲ ಭಕ್ತಿ ಮತ್ತು ಪ್ರೇಮ ತುಂಬಿ ತುಳುಕುತ್ತಿದ್ದ ಅವರ ಜೀವನಕ್ಕೂ, ಬಂಗಾಳದಲ್ಲಿ ಶ್ರೀಕೃಷ್ಣಭಕ್ತಿಯ ಸುಧೆಯನ್ನು ಹಂಚಿದ, ಶ್ರೀಕೃಷ್ಣನ ಅವತಾರ ಎನಿಸಿದ ಶ್ರೀ ಚೈತನ್ಯ ಮಹಾಪ್ರಭುಗಳ ಜೀವನಕ್ಕೂ ತೀರಾ ನಿಕಟವಾದ ಹೋಲಿಕೆ ಕಂಡುಬರುತ್ತದೆ. ಈ ಇಬ್ಬರು ಮಹಾಪುರುಷರು ಸಾಮಾನ್ಯ ಜನತೆಗೂ ಮುಕ್ತಿಮಾರ್ಗವನ್ನು ತೋರಿಸಿಕೊಡುವುದರ ಮೂಲಕ ನೈತಿಕತೆ, ವಿರಕ್ತಿ, ಶುದ್ಧ ಚಾರಿತ್ರ್ಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂಬುದನ್ನು ಬೋಧಿಸಿದರು.

## ಶ್ರೀರಾಮಕೃಷ್ಣರು ತೋರಿಸಿಕೊಟ್ಟ ಕೆಲವು ಜೀವನಾದರ್ಶಗಳು

**ತಾಯ್ತನದ ಹಿರಿಮೆ:** ಭಗವಂತನಲ್ಲಿ ತಾಯ್ತನದ ಹಿರಿಮೆಯನ್ನು ಕಂಡು, ಅದನ್ನು ಬೋಧಿಸಿದ್ದು ಶ್ರೀರಾಮಕೃಷ್ಣರು ಆಧುನಿಕ ಜಗತ್ತಿಗೆ ನೀಡಿದ ಮಹಾನ್ ಕೊಡುಗೆ. ಭಗವಂತನಲ್ಲಿ ಮಾತೃತ್ವದ ಪರಿಕಲ್ಪನೆ ಅವರು ಮಾಡಿದ 'ಷೋಡಶೀ ಪೂಜೆ'ಯಲ್ಲಿ ಸಾಕಾರರೂಪ ಪಡೆಯಿತು. ತಮ್ಮ ಜೀವನಸಂಗಾತಿಯಾದ ಶ್ರೀಮಾತೆ ಶಾರದಾದೇವಿಯನ್ನು ಅವರು ಜಗನ್ಮಾತೆ, ಶಕ್ತಿಸ್ವರೂಪಿಣಿ ಎಂದು ಅಚಲವಾಗಿ ನಂಬಿ, ಶ್ರದ್ಧಾಭಕ್ತಿಯಿಂದ ಪೂಜಿಸಿದರು. 'ಷೋಡಶೀ ಪೂಜೆ' ಶ್ರೀರಾಮಕೃಷ್ಣ ಪರಮಹಂಸರ ಆಧ್ಯಾತ್ಮಿಕ ಸಾಧನೆಗಳ ಪಥದಲ್ಲಿ ಅಂತಿಮ ಘಟ್ಟ. ಈ ಅಸಾಧಾರಣ ಆರಾಧನೆಯಲ್ಲಿ, ಪೂಜೆ ಸಲ್ಲಿಸಿದ ಪೂಜಾರಿ (ಶ್ರೀರಾಮಕೃಷ್ಣ) ಪೂಜೆಯನ್ನು ಸ್ವೀಕರಿಸಿದ ಶ್ರೀಮಾತೆ ಒಂದು ಅಸಾಧಾರಣ ಸ್ವರೂಪದ ಅಧ್ಯಾತ್ಮಿಕ ಏಕತೆಯಲ್ಲಿ ಸಮ್ಮಿಲನಗೊಂಡರು.

**ಸತ್ಯನಿಷ್ಠೆ:** "ಸತ್ಯ ನುಡಿಯುವುದೇ ಈ ಯುಗದ ದೊಡ್ಡ ಆಧ್ಯಾತ್ಮಿಕ ತಪಸ್ಸು" ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. "ಅವರು ತಮ್ಮ ಜೀವನವಿಡೀ ಸತ್ಯವನ್ನು ಬಿಗಿಯಾಗಿ ಹಿಡಿದುಕೊಳ್ಳಲಿಲ್ಲ; ಬದಲಾಗಿ ಸತ್ಯವೇ ಅವರನ್ನು ಬಿಗಿಯಾಗಿ ಹಿಡಿದುಕೊಂಡಿತು" ಎಂದು ಶ್ರೀರಾಮಕೃಷ್ಣ ಮಹಾಸಂಘದ ಹಿಂದಿನ ಅಧ್ಯಕ್ಷರಾಗಿದ್ದ ಸ್ವಾಮಿ ಗಂಭೀರಾನಂದರು ತಮ್ಮ ಒಂದು ಲೇಖನದಲ್ಲಿ ಹೇಳಿದ್ದಾರೆ. "ಸತ್ಯವಚನವೇ ಕಲಿಯುಗದ ತಪಸ್ಸು. ಈ ಯುಗದಲ್ಲಿ ಬೇರೆ ವಿಧದ ತಪಸ್ಸುಗಳನ್ನು ಮಾಡಲು ಬಲು ಕಠಿಣ. ಸತ್ಯಾರ್ಥಿಗೆ ಭಗವಂತ ದೊರೆತುಬಿಡುತ್ತಾನೆ." ಎನ್ನುವುದು ಶ್ರೀರಾಮಕೃಷ್ಣರ ಖಚಿತವಾದ ಅಭಿಪ್ರಾಯವಾಗಿತ್ತು.

**ಗುರು–ಶಿಷ್ಯ ಸಂಬಂಧ:** ಗುರು–ಶಿಷ್ಯರ ವಾತ್ಸಲ್ಯಪೂರ್ಣ ಸಂಬಂಧಕ್ಕೆ ಒಂದು ಉಜ್ವಲ ಉದಾಹರಣೆ ಶ್ರೀರಾಮಕೃಷ್ಣ–ನರೇಂದ್ರನಾಥರ (ಸ್ವಾಮಿ ವಿವೇಕಾನಂದ) ನಡುವಣ ಸಂಬಂಧ. ಅದು ಅಷ್ಟು ಆತ್ಮೀಯವೂ, ವಾತ್ಸಲ್ಯಪೂರ್ಣವೂ ಆಗಿತ್ತು. ಅದು ಜಗತ್ತಿಗೆಲ್ಲ ಆದರ್ಶಪ್ರಾಯವಾದ ಸಂಬಂಧ ಎಂದು ಹೇಳಬಹುದು.


**ಭಕ್ತಿಮಾರ್ಗ:** ಕಲಿಯುಗದಲ್ಲಿ ಭಗವಂತನ ಸಾಕ್ಷಾತ್ಕಾರಕ್ಕೆ ಅತಿ ಸುಲಭ ಮಾರ್ಗವೆಂದರೆ ನಾರದಭಕ್ತಿಸೂತ್ರದಲ್ಲಿ ಹೇಳಿರುವ ಭಕ್ತಿಮಾರ್ಗ. ನಮ್ಮ ಜೀವನದ ಸರ್ವಸ್ವವನ್ನೂ ಭಗವಂತನ ಪಾದಗಳಲ್ಲಿ ಸಮರ್ಪಿಸಿ, ಅನನ್ಯ ಭಕ್ತಿಯಿಂದ 'ಅವನನ್ನು' ಆರಾಧಿಸುವುದೇ ಭಗವಂತನ ಸಾಕ್ಷಾತ್ಕಾರಕ್ಕೆ ಏಕೈಕ ಮಾರ್ಗ ಎಂಬ ಮಾತನ್ನು ಗುರುದೇವರು ತಮ್ಮ ನಿತ್ಯಜೀವನದಲ್ಲಿ

ಅನುಷ್ಠಾನಗೊಳಿಸಿ, ಸಾಧಿಸಿ ತೋರಿಸಿದರು.

ಇಂದಿನ ಜನತೆ ತಮ್ಮ ಜೀವನದಲ್ಲಿ ಅನುಸರಿಸಬೇಕಾದ ವಿಶಿಷ್ಟ ಮಾದರಿಯ ಕರ್ಮಯೋಗವನ್ನು ಶ್ರೀರಾಮಕೃಷ್ಣ ಪರಮಹಂಸರು ನಮ್ಮ ಮುಂದಿರಿಸಿದರು. ಮೊದಲಿಗೆ ತೀವ್ರ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿ, ನಮ್ಮ ಇಷ್ಟದೈವವನ್ನು ಸಾಕ್ಷಾತ್ಕರಿಸಿಕೊಳ್ಳುವುದು, ಅನಂತರ ಸಮಾಜ ಜೀವನಕ್ಕೆ ಹಿಂತಿರುಗಿ ಜನರ ಸೇವೆ ಮಾಡುತ್ತ, ಬಡವರು, ದೀನದಲಿತರಲ್ಲಿ ಭಗವಂತನನ್ನು ಕಾಣುವುದು – ಇದು ಕರ್ಮಯೋಗದ ಸ್ವರೂಪ. ಗೌತಮ ಬುದ್ಧ ಮತ್ತು ಏಸುಕ್ರಿಸ್ತರಂತೆ ಶ್ರೀರಾಮಕೃಷ್ಣರಿಗೂ ಸಮಾಜದಲ್ಲಿ ತೀರಾ ಕೆಳಸ್ತರದಲ್ಲಿರುವ ದೀನದಲಿತರು, ಅಸಹಾಯಕರು, ನಿರ್ಗತಿಕರ ಬಗ್ಗೆ ಅಪಾರ ಅನುಕಂಪವಿದ್ದಿತು. ಈ ದಿವ್ಯಚೇತನ ತಮ್ಮ ಆಧ್ಯಾತ್ಮಿಕ ಸಾಧನೆಗಳ ಮುಖಾಂತರ ಗಳಿಸಿದ ದೈವೀಪ್ರೇಮವನ್ನು ಅವರೆಲ್ಲರಿಗೂ ಹಂಚಿದರು. ಸಮಕಾಲೀನ ನಾಟಕಕಾರ ಗಿರೀಶ ಚಂದ್ರ ಘೋಷ, ಕಾಳೀಪದ, ಸುರೇಂದ್ರ ಮುಂತಾದ ಶಿಷ್ಯರು ಶ್ರೀರಾಮಕೃಷ್ಣರ ದೈವೀಸ್ಪರ್ಶ ದಿಂದ ಈ ರೀತಿಯಲ್ಲಿ ಉದ್ಧಾರವಾದ ಭಾಗ್ಯಶಾಲಿಗಳು.

ಒಮ್ಮೆ ಶ್ರೀರಾಮಕೃಷ್ಣರು ಒಬ್ಬ ಅಸ್ಪೃಶ್ಯನ ಮನೆಯ ಶೌಚಾಲಯವನ್ನು ಸ್ವಚ್ಛಗೊಳಿಸಿದ ಉದಾಹರಣೆ ಅವರ ಜೀವನ ಚರಿತ್ರೆಯಲ್ಲಿದೆ. ರಸಿಕ ಎಂಬುವವನು ದಕ್ಷಿಣೇಶ್ವರದ ಕಾಳಿ ದೇವಾಲಯದಲ್ಲಿ ಕಸಗುಡಿಸುವ ಕೆಲಸ ಮಾಡುತ್ತಿದ್ದ, ಗುರು ದೇವರ ಸಮೀಪಕ್ಕೆ ಹೋಗಲೂ ಅಂಜುತ್ತಿದ್ದ. ಒಂದು ದಿನ ಧೈರ್ಯ ಮಾಡಿ ಆತ ಗುರುದೇವರನ್ನು ಸಮೀಪಿಸಿ ಭಕ್ತಿಯಿಂದ ಅವರ ಪಾದಗಳಿಗೆ ಅಡ್ಡಬಿದ್ದ. ಅನಂತರ ಅಳುತ್ತಾ ಆರ್ತನಾಗಿ ಕೇಳಿದ, "ಪೂಜ್ಯರೆ, ಮುಂದೆ ನನ್ನ ಗತಿಯೇನು?" ಆ ಮಾತು ಕೇಳಿದಾಕ್ಷಣ ಶ್ರೀರಾಮಕೃಷ್ಣರು ಸಮಾಧಿಸ್ಥರಾದರು. ಸ್ವಲ್ಪ ಹೊತ್ತಿನಲ್ಲಿ ಜಾಗೃತ ಸ್ಥಿತಿಗೆ ಮರಳಿ ರಸಿಕನಿಗೆ ಆಶೀರ್ವದಿಸುತ್ತಾ "ನಿನ್ನ ಸಾವಿನ ಕ್ಷಣ ಸಮೀಪಿಸಿದಾಗ ನೀನು ಎಲ್ಲವನ್ನೂ ಪಡೆಯುತ್ತೀಯೆ" ಎಂದರು. ಗುರುದೇವರ ಮಹಾಸಮಾಧಿಯ ತರುವಾಯ ರಸಿಕ ತನ್ನ ದೈನಂದಿನ ಜೀವನದ ಬಹುಭಾಗವನ್ನು ತುಲಸೀತೋಟದಲ್ಲಿ ನಿತ್ಯ ಪ್ರಾರ್ಥನೆ ಮತ್ತು ಭಜನೆಯಲ್ಲಿ ಕಳೆಯುತ್ತಿದ್ದ. ಅಂತಿಮ ಕ್ಷಣ ಸಮೀಪಿಸಿದಾಗ ಅವನ ಮುಖ ದಲ್ಲಿ ಅಲೌಕಿಕ ಮಂದಹಾಸ ಹರಡಿತು. ಆತ ಭಾವೋದ್ವೇಗ ದಿಂದ 'ಓ ತಂದೆ, ನೀನು ಬಂದೆಯಾ?' ಎಂದು ಉದ್ಗರಿಸುತ್ತಾ ಕೊನೆಯುಸಿರೆಳೆದ. ಇದೇ ರೀತಿ ಕೊಲ್ಕತಾದ ಸ್ಟಾರ್ ಥಿಯೇಟರ್‌ನ ನಟಿಯೊಬ್ಬಳಿಗೆ ಆಶೀರ್ವಾದ ಮಾಡಿ, ಅವಳನ್ನು ಉದ್ಧಾರ ಮಾಡಿದ ಪ್ರಸಂಗವೂ ಶ್ರೀರಾಮಕೃಷ್ಣರ ಜೀವನದಲ್ಲಿದೆ.

ಶ್ರೀರಾಮಕೃಷ್ಣರ ದಿವ್ಯ ಬೋಧನೆಗಳನ್ನು ನಿತ್ಯಜೀವನದಲ್ಲಿ ಅನುಷ್ಠಾನಗೊಳಿಸುವ ಮೂಲಕ ನಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬಹುದು. "ಭಾರತದ ಪ್ರತಿಯೊಂದು ಮನೆ ಯಲ್ಲಿಯೂ ನನ್ನ ಭಾವಚಿತ್ರವನ್ನು ಜನರು ಪೂಜಿಸುತ್ತಾರೆ" ಎಂದು ಶ್ರೀರಾಮಕೃಷ್ಣರು ಒಂದು ಸಂದರ್ಭದಲ್ಲಿ ಹೇಳಿದ್ದರು.



" ಪೂಜ್ಯರೆ, ಮುಂದೆ ನನ್ನ ಗತಿಯೇನು?"

ಅದು ಇಂದು ನಿಜವಾಗತೊಡಗಿದೆ. ಇಪ್ಪತ್ತನೆಯ ಶತಮಾನದ ಆರಂಭದಿಂದ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶ ಮಾನವಕುಲದಲ್ಲಿ ವ್ಯಾಪಿಸಲು ತೊಡಗಿತು. ಇನ್ನು ಮುಂದಿನ ನೂರಾರು ವರ್ಷಗಳ ಕಾಲ ಅವರ ಜೀವನ-ಸಂದೇಶ ಮಾನವಕುಲದಲ್ಲಿ ಹೀಗೆಯೇ ವ್ಯಾಪಿಸಲಿದೆ.

## ಮಮತೆಯ ಸಾಕಾರಮೂರ್ತಿ

ಶ್ರೀಮಾತೆ ಶಾರದಾದೇವಿಯವರ ಹೆಸರು ಇಂದು ಮನೆ ಮಾತಾಗಿ ಪರಿಣಮಿಸಿದೆ. ಅವತಾರಪುರುಷ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಜೀವನಸಂಗಾತಿಯಾಗಿದ್ದ ಶ್ರೀಮಾತೆ ಕರುಣೆ ಮತ್ತು ಮಮತೆಯ ಸಾಕಾರ ರೂಪ ವೆನಿಸಿದ್ದರು. ಅವರು ಜಗನ್ಮಾತೆಯ ಅವತಾರವೇ ಆಗಿದ್ದರು. "ಪ್ರಾಪಂಚಿಕ ಬದುಕಿನಲ್ಲಿ ವಿರಕ್ತಿ ಮತ್ತು ತ್ಯಾಗ ಮನೋಭಾವ ಬೆಳೆಸಿಕೊಳ್ಳಿರಿ" ಎಂದು ಶ್ರೀಮಾತೆ ತಮ್ಮ ಬಳಿಗೆ ಆಧ್ಯಾತ್ಮಿಕ ಮಾರ್ಗದರ್ಶನ ಬೇಡಿ ಬಂದವರಿಗೆ ಬೋಧಿಸುತ್ತಿದ್ದರು. "ಜೀವನದಲ್ಲಿ ಮೇಲಿಂದ ಮೇಲೆ ಹೊಡೆತಗಳು ಬಿದ್ದಾಗ, ಆಘಾತಗಳನ್ನು ಅನುಭವಿಸಿದಾಗ, ಅನೇಕರಿಗೆ ದೇವರ ನೆನಪಾಗುತ್ತದೆ. ಆದರೆ ಬಾಲ್ಯದಿಂದಲೇ, ಆಗ ತಾನೇ ಅರಳಿದ ಹೊಚ್ಚ ಹೊಸ ಹೂವಿನಂತೆ ಯಾರು ತಮ್ಮ ಮನಸ್ಸನ್ನು ಸಂಪೂರ್ಣವಾಗಿ ದೇವರಿಗೆ ಅರ್ಪಿಸಿಕೊಳ್ಳುತ್ತಾರೋ ಅವರೇ ಧನ್ಯರು. ಆದ್ದರಿಂದ, ಯೌವನದಲ್ಲಿಯೆ ವಿರಕ್ತ ಭಾವನೆ ಬೆಳೆಸಿಕೊಳ್ಳುವುದನ್ನು ನಾವು ಕಲಿಯಬೇಕು" ಎಂದು ಅವರು

ಪರಮಹಂಸರು ಅಮರ್ತ್ಯದ ದಿವ್ಯನದಿಯನ್ನು ಮರ್ತ್ಯಕ್ಕೆಳೆತಂದರು. ಆ ತ್ರಿಪಥಗೆ ಭವ್ಯವಾದ ಅಣೆಕಟ್ಟು ಕಟ್ಟಿ, ಕಾಲುವೆಗಳನ್ನು ತೆಗೆದು. ಲೋಕದ ಮೇಲೆಲ್ಲಾ ಅದರ ಅಮೃತವಾರಿಯನ್ನು ಹರಿಯಬಿಟ್ಟು, ಅದರ ಲಾಲನ ಪಾಲನಾದಿಗಳ ಸುವ್ಯವಸ್ಥೆಗಾಗಿ ಕ್ರಮಬದ್ಧವಾದ ವಿಶ್ವಸಂಸ್ಥೆಯೊಂದನ್ನು ನಿರ್ಮಿಸಿ, ಲೋಕನೇತ್ರಗಳನ್ನು ಸೆಳೆಯುವಂತೆ ದೀಪಾಕ್ಷರೋಜ್ವಲವಾದ ನಾಮಾಂಕಿತದಿಂದ ಅದನ್ನು ಅಲಂಕರಿಸಿ, ಅದನ್ನೂ ಜಗನ್ಮಾನ್ಯವನ್ನಾಗಿ ಮಾಡಿ ತಾವೂ ಜಗದ್ವಿಖ್ಯಾತರಾದರು ಶ್ರೀ ವಿವೇಕಾನಂದರು. ಆದರೆ ಶ್ರೀಮಾತೆ? ಸೂರ್ಯಚಂದ್ರರ ಮುಂದೆ ಬಹುದೂರದ ಕಿರುತಾರೆಯಂತೆ, 'ಅರಿಯನು ನಾನೆಲೆ ನೀನಾರೋ' ಎಂಬ ಪ್ರಶ್ನೆಗೂ ಪಾತ್ರರಾಗುತ್ತಾರೆ. ಆದರೂ ವೈಜ್ಞಾನಿಕ ದೂರದರ್ಶಕ ಯಂತ್ರದ ನಿರ್ದಾಕ್ಷಿಣ್ಯವೂ ನಿಷ್ಪಕ್ಷಪಾತವೂ ಸೂಕ್ಷ್ಮತಮವೂ ಆದ ಸಮೀಕ್ಷೆಗೆ ಸಿಲುಕಿದಾಗ ಕಿರುತಾರೆಯೇ ಸೂರ್ಯಚಂದ್ರರಿಗೂ ಸಾವಿರಮಡಿ ಹಿರಿದಾಗುವ ಭವ್ಯತರ ಸತ್ಯ ಹೊರಬೀಳದೇನು? – ಶ್ರೀ ಕುವೆಂಪು

ಹೇಳುತ್ತಿದ್ದರು. ತಾವು ಬೋಧಿಸಿದ್ದನ್ನು ಶ್ರೀಮಾತೆ ನಿಜಜೀವನದಲ್ಲಿ ಆಚರಿಸಿ ತೋರಿಸಿದರು. ಗಿಡದಲ್ಲಿ ಅರಳಿದ ಹೊಚ್ಚ ಹೊಸ ಹೂವಿನಂತೆ ಅವರು ತಮ್ಮ ಸಂಪೂರ್ಣ ಮನಸ್ಸನ್ನು ದೇವರ ಪಾದಗಳಲ್ಲಿ ಸಮರ್ಪಿಸಿದ್ದರು.

### ಶ್ರೀಮಾತೆಯವರ ಸಂದೇಶ

ಶ್ರೀಮಾತೆಯವರು ಶ್ರೀರಾಮಕೃಷ್ಣರ ಮಹಾಸಮಾಧಿಯ ಬಳಿಕ ೩೪ ವರ್ಷಗಳ ಕಾಲ ಬದುಕಿದ್ದರು. ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಸಂದೇಶವನ್ನು ಪ್ರಸಾರ ಮಾಡುವ ಮಹತ್ವದ ಕಾರ್ಯಭಾರ ನಿರ್ವಹಿಸಿದರು. ಆ ಸಂದೇಶವಾದರೂ ಏನು? "ದೇವರು ಕೇವಲ ನಂಬಿಕೆ–ಶ್ರದ್ಧೆ ಇರಿಸಬೇಕಾದ ಶಕ್ತಿಯಷ್ಟೆ ಅಲ್ಲ, ಸೇವೆಯ ಮೂಲಕ ಪಡೆದುಕೊಳ್ಳಬೇಕಾದ ಭಗವಂತನ ದರ್ಶನ ಕೂಡ ನಮ್ಮ ಜೀವಮಾನದ ಪ್ರಮುಖ ಗುರಿಯಾಗಬೇಕು" ಎನ್ನುವುದು.

ಶ್ರೀಮಾತೆಯವರ ಇನ್ನೊಂದು ಅನನ್ಯ ಉಪದೇಶವೆಂದರೆ "ಇತರರಲ್ಲಿ ತಪ್ಪು ಹುಡುಕಬೇಡಿ. ನಿಮ್ಮ ತಪ್ಪುಗಳನ್ನು ನೀವೇ ಕಂಡುಕೊಳ್ಳಿರಿ. ಆಗ ಇಡೀ ಜಗತ್ತು ನಿಮ್ಮದೇ ಆಗುತ್ತದೆ." ಈ ಉಪದೇಶವನ್ನು ಮನನ ಮಾಡಿದಾಗ ಜೀವನದಲ್ಲಿ ನಾವು ಅನುಭವಿಸುವ ಕಷ್ಟಗಳಿಗೆ, ಇನ್ನೊಬ್ಬರಲ್ಲಿ ತಪ್ಪು ಕಂಡುಹಿಡಿಯುವ ನಮ್ಮ ಕೆಟ್ಟ ಪ್ರವೃತ್ತಿಯೇ ಕಾರಣವೆನಿಸುತ್ತದೆ.

### ಮಾತೃತ್ವದ ಸುಧೆ

ಶ್ರೀಮಾತೆ ಶಾರದಾದೇವಿ ಭಗವಂತನ ತಾಯ್ತನದ ಮಹತ್ವವನ್ನು ಜಗತ್ತಿಗೆ ತೋರಿಸಿಕೊಟ್ಟರು. ಮಮತಾಮಯಿಯಾದ ಶ್ರೀಮಾತೆಯವರ ಹೃದಯ ತಮ್ಮ ಸುತ್ತಮುತ್ತಲಿನ ಸಮಾಜದ ಜನರ ದುಃಖಕ್ಕೆ ಮಿಡಿಯುತ್ತಿತ್ತು. ವಿನಮ್ರತೆ ಎಂಬುದು ಶ್ರೀಮಾತೆಯ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತಿದ್ದ ಮತ್ತೊಂದು ಗುಣ. ಒಮ್ಮೆ ಜಯರಾಂಬಾಟಿ ಗ್ರಾಮದ (ಶ್ರೀಮಾತೆಯವರ ಹುಟ್ಟೂರು) ಕಾವಲುಗಾರನೊಬ್ಬ ಶ್ರೀಮಾತೆಯನ್ನು ಕೇಳಿದ: "ಜನ ನಿಮ್ಮನ್ನು ದೇವಿ ಎಂದೂ ಜಗನ್ಮಾತೆಯ ಅವತಾರವೆಂದೂ ಕರೆಯುತ್ತಾರೆ. ನನಗೆ ಅದೆಲ್ಲ ಅರ್ಥವಾಗುತ್ತಿಲ್ಲ." ಅದಕ್ಕೆ ಶ್ರೀಮಾತೆ ಹೇಳಿದರು: "ನಿನಗೆ ಇದೆಲ್ಲ ಅರ್ಥವಾಗಬೇಕಿಲ್ಲ, ನೀನು ಇಷ್ಟು ನೆನಪಿಟ್ಟುಕೊಂಡರೆ ಸಾಕು. ನೀನು ನನ್ನ ಅಣ್ಣ. ನಾನು ನಿನ್ನ ತಂಗಿ, ಅಷ್ಟೆ."

ಶ್ರೀಮಾತೆ ಶಾರದಾದೇವಿ ಅಪಾರ ಕರುಣಾಮಯಿ. "ನಾನು ಒಳ್ಳೆಯವರಿಗೂ ತಾಯಿ; ಕೆಟ್ಟವರಿಗೂ ತಾಯಿ. ಜೀವನದಲ್ಲಿ ಎಂಥ ಕಷ್ಟ ಬಂದರೂ ನಿನಗೆ ನೀನೆ ಹೇಳಿಕೋ, ನನಗೊಬ್ಬಳು ತಾಯಿ ಇದ್ದಾಳೆ." "ನನ್ನ ಮಗು ಹೊಲಸಿಗೆ ಬಿದ್ದರೆ ಅವನನ್ನು ಅಲ್ಲೇ ಇರಲು ನಾನು ಬಿಡುವೆನೇ? ಮಗುವನ್ನು ಎತ್ತಿ, ಹೊಲಸು ತೊಳೆದು, ಸ್ವಚ್ಛಗೊಳಿಸಿ ನನ್ನ ತೊಡೆಯ ಮೇಲೆ ಮಲಗಿಸಿಕೊಳ್ಳುವೆನು." ಶ್ರೀಮಾತೆ ತಮ್ಮ ಶಿಷ್ಯರ ಬಗ್ಗೆ, ಸಾಮಾನ್ಯ ಭಕ್ತರ ಬಗ್ಗೆ ಇಂಥ ಮನೋಭಾವ ಹೊಂದಿದ್ದರು.

### ವೇದಾಂತಸಿಂಹ

ಸ್ವಾಮಿ ವಿವೇಕಾನಂದರು ಮಹಾನ್ ಋಷಿಗಳ ಪರಂಪರೆಗೆ ಸೇರಿದವರಾಗಿದ್ದರು. ಬೌದ್ಧಿಕವಾಗಿಯೂ ವೈಚಾರಿಕವಾಗಿಯೂ ವಿವೇಕಾನಂದರು ಒಂದು ಮಹಾನ್ ಚೇತನ. ಬೌದ್ಧಿಕತೆಯಷ್ಟೇ ಅವರ ಹೃದಯ ಕೂಡ ದೊಡ್ಡದಾಗಿತ್ತು. ಒಂದು ಬಾರಿ ಅವರು ಬೇಲೂರು ಮಠದಲ್ಲಿ ತಮ್ಮ ಶಿಷ್ಯರೊಂದಿಗೆ ಮಾತನಾಡುತ್ತಾ "ಬುದ್ಧಿ ಮತ್ತು ಹೃದಯದ ಮಧ್ಯೆ ಸಂಘರ್ಷ ಉದ್ಭವಿಸಿದರೆ ನಾನು ಹೃದಯವನ್ನೇ ಅನುಸರಿಸುತ್ತೇನೆ" ಎಂದಿದ್ದರು. ಇಂದಿನ ಜಾಗತೀಕರಣ, ಉದಾರೀಕರಣಗಳ ವಾತಾವರಣದ ಹಿನ್ನೆಲೆಯಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳು ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ಹಾಗೂ ಅವರು ತಮ್ಮ ನಿತ್ಯಜೀವನದಲ್ಲಿ ಅನುಷ್ಠಾನಗೊಳಿಸಿದ ವೇದಾಂತ ತತ್ವಗಳ ಮೇಲೆ ಆಧಾರಿತವಾಗಿರಬೇಕಾದದ್ದು ಅತ್ಯಂತ ಆವಶ್ಯಕ. ಮನುಷ್ಯನ ಒಳ್ಳೆಯತನದಲ್ಲಿ, ಮಾನವ ಆತ್ಮದ ಚಿರಂತನ ಪಾವಿತ್ರ್ಯದಲ್ಲಿ ಸ್ವಾಮಿ ವಿವೇಕಾನಂದರು ಅಚಲವಾದ ನಂಬಿಕೆಯನ್ನು ಇರಿಸಿದ್ದರು. ಮಾನವ ಆತ್ಮಸ್ವರೂಪಿ. ಆತ್ಮ ಪರಿಶುದ್ಧವಾದುದು, ಮುಕ್ತವಾದುದು. ದಿವ್ಯವಾದುದು ಎಂಬ ಉಪನಿಷತ್ತುಗಳ ಸಂದೇಶವನ್ನು ಅವರು ಆಧುನಿಕ ಜಗತ್ತಿಗೆ ಸಾರಿದರು.

### ಭಾರತಭಾಗ್ಯವಿಧಾತ

"ಏಳಿ, ಜಾಗೃತರಾಗಿ, ಗುರಿಮುಟ್ಟುವ ತನಕ ನಿಲ್ಲದಿರಿ" ಎಂಬುದೇ ಸ್ವಾಮಿ ವಿವೇಕಾನಂದರ ಉದಾತ್ತ ಸಂದೇಶ. ಸ್ವಾಮೀಜಿ ಎಲ್ಲ ವಿಧದ ಅನ್ಯಾಯಗಳ ವಿರುದ್ಧ, ಮಾನವನ ದೌರ್ಬಲ್ಯ ಮತ್ತು ಹೇಡಿತನಗಳ ವಿರುದ್ಧ ಹೋರಾಡಿದರು. ಈ ಹೋರಾಟದಲ್ಲಿ, ಪ್ರೇಮ ಮತ್ತು ದಯೆ ಅವರ ಕೈಯಲ್ಲಿದ್ದ

ಪ್ರಬಲ ಆಯುಧಗಳಾಗಿದ್ದವು. ಇವೆರಡು ಆಯುಧಗಳ ನೆರವಿನಿಂದ ಅವರು ಸಮಸ್ತ ಭಾರತೀಯರ ಹೃದಯಗಳನ್ನು ಗೆದ್ದುಕೊಂಡರು. ಪ್ರತಿಯೊಂದು ಸುಧಾರಣೆಗೆ ಮೊದಲು ಧಾರ್ಮಿಕ ಕ್ಷೇತ್ರದಲ್ಲಿ ದೊಡ್ಡ ಪರಿವರ್ತನೆಯಾಗಬೇಕು. ಭಾರತದ ಬದುಕಿನ ಮೇಲೆ ಸಮಾಜವಾದಿ ಅಥವಾ ಇನ್ನಾವುದೇ ರಾಜಕೀಯ ಸಿದ್ಧಾಂತದ ಅಲೆ ಅಪ್ಪಳಿಸುವ ಮೊದಲು, ಆಧ್ಯಾತ್ಮಿಕ ವಿಚಾರಗಳು ಪ್ರಳಯಸ್ವರೂಪದಲ್ಲಿ ವ್ಯಾಪಿಸಬೇಕು ಎಂದು ಸ್ವಾಮೀಜಿ ಹೇಳುತ್ತಿದ್ದರು.

ನಮ್ಮ ಪ್ರಾಚೀನ ಋಷಿಮುನಿಗಳು ಪ್ರತಿಪಾದಿಸಿದ "ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ, ಅತಿಥಿದೇವೋ ಭವ" ಎಂಬ ಸೂಕ್ತಿಗಳಿಗೆ ಸ್ವಾಮೀಜಿ **"ದರಿದ್ರ ದೇವೋ ಭವ, ಮೂರ್ಖದೇವೋ ಭವ"** ಎಂಬ ನುಡಿಗಳನ್ನೂ ಸೇರಿಸಿದರು. "ಬಡವರಿಗೆ, ನಿರ್ಗತಿಕರಿಗೆ ಒಂದು ತುತ್ತು ಆಹಾರ ಒದಗಿಸದ ದೇವರಲ್ಲಿ ನನಗೆ ನಂಬಿಕೆ ಇಲ್ಲ. ಭಾರತದ ಉದ್ಧಾರವಾಗಬೇಕು. ಬಡವರಿಗೆ ಅನ್ನ ದೊರಕಬೇಕು. ಶಿಕ್ಷಣ ವ್ಯಾಪಕವಾಗಿ ಪ್ರಸಾರವಾಗಬೇಕು" ಎಂದು ಸ್ವಾಮೀಜಿ ಪದೇ ಪದೇ ಒತ್ತಿ ಹೇಳುತ್ತಿದ್ದರು.

## ವಿಶ್ವಮಾನವ

ನಾಸ್ತಿಕವಾದದ ನೆಲೆ ಎನಿಸಿದ್ದ ರಷ್ಯಾ ಮತ್ತು ಚೀನಾ ದೇಶಗಳಲ್ಲಿಯೂ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರ ಬೋಧನೆಗಳು, ಆದರ್ಶಗಳು ಅಲ್ಲಿನ ಜನರ ಮನ ಸೆಳೆದಿವೆ. ಕೆಲವು ವರ್ಷಗಳ ಹಿಂದೆ ರಶಿಯಾ ದೇಶದ ರಾಜಧಾನಿ ಮಾಸ್ಕೋದಲ್ಲಿ ರಾಮಕೃಷ್ಣ ಮಿಶನ್ ಸಂಸ್ಥೆ ಸ್ಥಾಪನೆಯಾಗಿದೆ. ಹುವಾನ್ ಝಿಜ್ ಚುವಾನ್ ಎಂಬ ಚೀನೀ ಲೇಖಕ ಕೆಲವು ವರ್ಷಗಳ ಹಿಂದೆ ಸ್ವಾಮಿ ವಿವೇಕಾನಂದರ ಬಗ್ಗೆ ಒಂದು ಪುಟ್ಟ ಪುಸ್ತಕವನ್ನು ಬರೆದಿದ್ದರು. ಸ್ವಾಮೀಜಿಯವರ ದೇಶಭಕ್ತಿ, ದೇಶಬಾಂಧವರ ಮೇಲೆ ಅವರಿಗಿದ್ದ ಪ್ರೀತಿ, ಸಾಮ್ರಾಜ್ಯಶಾಹಿ, ವಸಾಹತುಶಾಹಿ ಪ್ರಭುತ್ವದ ವಿರುದ್ಧ ಅವರಿಗಿದ್ದ ಭಾವನೆಗಳು –ಮುಂತಾದವನ್ನೆಲ್ಲ ಈ ಕೃತಿಯಲ್ಲಿ ಅವರು ವಿವರಿಸಿದ್ದಾರೆ.

ಸ್ವಾಮೀಜಿಯವರ ದಿವ್ಯಜೀವನಕಾಲ ತೀರಾ ಕಡಿಮೆಯದಾಗಿತ್ತು. ಅವರು ಬದುಕಿದ್ದುದು ಕೇವಲ ೩೯ ವರ್ಷಗಳು. ಈ ಅಲ್ಪ ಅವಧಿಯಲ್ಲಿ ಅವರು ಭಾರತದ ಆಧ್ಯಾತ್ಮಿಕ ಲೋಕದ ತೇಜಃಪುಂಜ ನಕ್ಷತ್ರದಂತೆ ಮಿನುಗಿದರು. ಸ್ವಾಮೀಜಿ ಕೇವಲ ಧಾರ್ಮಿಕ ಸುಧಾರಕರಷ್ಟೇ ಆಗಿರಲಿಲ್ಲ, ಅವರದು ವಿರಕ್ತಿ, ದೇಶಪ್ರೇಮ, ಆಧ್ಯಾತ್ಮಿಕ ಸಾಧನೆಯಿಂದ ಮುಪ್ಪುರಿಗೊಂಡು ವಿಕಸಿತವಾದ ಅನುಪಮ ವ್ಯಕ್ತಿತ್ವ, ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಶಕ್ತಿ ಮತ್ತು ಸತ್ವ ಇಂದಿಗೂ ಜೀವಂತವಾಗಿದೆ ಎಂಬುದಕ್ಕೆ ಅವರ ಸಂದೇಶಗಳೇ ಜೀವಂತ ಸಾಕ್ಷಿಯಾಗಿವೆ. ■

## ರಾಮಕೃಷ್ಣ ಮಿಷನ್ ಆಶ್ರಮ, ಕೋಟೆ, ಬೆಳಗಾವಿ – ವಾರ್ಷಿಕೋತ್ಸವ ಸಮಾರಂಭಗಳು 2008

### 1–2–2008 ಶುಕ್ರವಾರ

1. ಬೆಳಗ್ಗೆ 9–30ರಿಂದ ಮಧ್ಯಾಹ್ನ 12–30ರ ವರೆಗೆ : *ವಿದ್ಯಾರ್ಥಿ ಸಮಾವೇಶ* : (ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ – ಇಂಗ್ಲೀಷ್‌ನಲ್ಲಿ) – ಭಾಷಣಗಳು:– ಸ್ವಾಮಿ ಸುಖಾತ್ಮಾನಂದಜಿ ಮಹಾರಾಜ್ (ಅಧ್ಯಕ್ಷರು,ರಾಮಕೃಷ್ಣ ಮಠ, ಊಟಿ) ಸ್ವಾಮಿ ಸತ್ಯರೂಪಾನಂದಜಿ ಮಹಾರಾಜ್ (ಕಾರ್ಯದರ್ಶಿಗಳು, ರಾಮಕೃಷ್ಣ ಮಿಷನ್ ವಿವೇಕಾನಂದ ಆಶ್ರಮ, ರಾಯಪುರ) 2.ಮಧ್ಯಾಹ್ನ 2 ಗಂಟೆಯಿಂದ ಸಾಯಂಕಾಲ 5 ರ ವರೆಗೆ: *ವಿದ್ಯಾರ್ಥಿ ಸಮಾವೇಶ*– (ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ–ಕನ್ನಡದಲ್ಲಿ) ಉದ್ಘಾಟನೆ : ಡಾ. ಗುರುಮೂರ್ತಿ (ನಿರ್ದೇಶಕರು ಬಿ.ಐ.ಎಮ್.ಎಸ್.) ಭಾಷಣಗಳು:– ಡಾ. ಬಸವರಾಜ ಜಗಜಂಪಿ (ಪ್ರಾಂಶುಪಾಲರು, ಲಿಂಗರಾಜ ಕಾಲೇಜು, ಬೆಳಗಾವಿ) ಶ್ರೀ ಸುರೇಶ್ ಕುಲಕರ್ಣಿ (ಸಂಪಾದಕರು, ವಿಜ್ಞಾನ ಸಾರಥಿ. ಧಾರವಾಡ) ಅಧ್ಯಕ್ಷೀಯ ಭಾಷಣ: ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ (ಟ್ರಸ್ಟಿ, ರಾಮಕೃಷ್ಣ ಮಠ ಮತ್ತು ಮಿಷನ್ ಮತ್ತು ಅಧ್ಯಕ್ಷರು, ರಾಮಕೃಷ್ಣ ಮಠ,ಚೆನ್ನೈ) 3.ಸಂಜೆ 6 ಗಂಟೆಗೆ: *ಸಾಂಸ್ಕೃತಿಕ ಕಾರ್ಯಕ್ರಮ:* ಸಂತೂರು ವಾದನ: ಪಂಡಿತ್ ಶಿವಕುಮಾರ್ ಶರ್ಮ ಅವರಿಂದ.

### 2–2–2008 ಶನಿವಾರ

1. ಬೆಳಗ್ಗೆ 9–00ರಿಂದ ಮಧ್ಯಾಹ್ನ 12–25ರ ವರೆಗೆ: *ಶಿಕ್ಷಕರ ಸಮಾವೇಶ* – (ಕನ್ನಡದಲ್ಲಿ) : ಉದ್ಘಾಟನೆ: ಮೊನ್ನಪ್ಪ (ಆಯುಕ್ತರು, ಶಿಕ್ಷಣ ಇಲಾಖೆ) ಭಾಷಣಗಳು:– ರಘೋತ್ತಮ ರಾವ್ (ಜೈನ್ ವಿದ್ಯಾಸಂಸ್ಥೆಗಳು, ಬೆಂಗಳೂರು), ಡಾ. ಆರ್. ಬಾಲಸುಬ್ರಮಣ್ಯಂ (ಸಮಾಜ ಸೇವಕರು, ಹೆಚ್.ಡಿ.ಕೋಟೆ) ಅಧ್ಯಕ್ಷೀಯ ಭಾಷಣ: ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹರಾಜ್ 2. ಮಧ್ಯಾಹ್ನ 1–30 ರಿಂದ 5 ಗಂಟೆಯ ತನಕ: *ಯುವ ಸಮಾವೇಶ:*– (ಇಂಗ್ಲೀಷ್‌ನಲ್ಲಿ) ಭಾಷಣಗಳು:– ಡಾ. ಆರ್. ಬಾಲಸುಬ್ರಮಣ್ಯಂ, ಸ್ವಾಮಿ ಸುಖಾತ್ಮಾನಂದಜಿ, ಸ್ವಾಮಿ ಸತ್ಯರೂಪಾನಂದಜಿ, 3. ಸಂಜೆ 6 ಗಂಟೆಗೆ: ಸಾಂಸ್ಕೃತಿಕ ಕಾರ್ಯಕ್ರಮ: ಶ್ರೀ ಸಿ. ಅಶ್ವಥ್ ರವರಿಂದ ಸಂತವಾಣಿ– ದಾಸರ ಮತ್ತು ಸಂತ ಶಿಶುನಾಳ ಶರೀಫರ ರಚನೆಗಳು

### 3–2–2008, ಭಾನುವಾರ

1. ಬೆಳಗ್ಗೆ 8–30ರಿಂದ ಸಾಯಂಕಾಲ 5 ಗಂಟೆಯವರೆಗೆ *ಭಕ್ತ ಸಮ್ಮೇಳನ* – (ಕನ್ನಡದಲ್ಲಿ) ಭಾಷಣಗಳು:– ಪ್ರಭು ಚನ್ನಬಸವ ಸ್ವಾಮೀಜಿ (ಮೊಟಗಿ ಮಠ, ಅಥಣಿ, ಬೆಳಗಾವಿ ಜಿಲ್ಲೆ), ಸ್ವಾಮಿ ಮುಕ್ತಿದಾನಂದಜಿ ಮಹರಾಜ್ (ಮುಖ್ಯಸ್ಥರು, ರಾಮಕೃಷ್ಣ ವಿದ್ಯಾಶಾಲೆ, ಮೈಸೂರು). ಶ್ರೀರಾಮಕೃಷ್ಣ ವಚನಸುಧಾ:– ಸೂಲಿಬೆಲೆ ಚಕ್ರವರ್ತಿ ಮತ್ತು ಶ್ರೀ ಸತೀಶ್ ಕಾಸರವಳ್ಳಿ ಭಾಷಣಗಳು:– ರಘೋತ್ತಮ ರಾವ್, ಸ್ವಾಮಿ ಗೌತಮಾನಂದಜಿ ಮಹಾರಾಜ್ 2. ಸಾಯಂಕಾಲ 5ಗಂಟೆಗೆ : ಭಾಷಣ (ಹಿಂದಿಯಲ್ಲಿ) : ಸ್ವಾಮಿ ಸತ್ಯರೂಪಾನಂದಜಿ ಮಹಾರಾಜ್ 3. ಸಂಜೆ 6 ಗಂಟೆಗೆ: ಸಾಂಸ್ಕೃತಿಕ ಕಾರ್ಯಕ್ರಮ: ಶ್ರೀ ಚಾರುದತ್ತ ಆಫ್ಳೆ ಅವರಿಂದ ಕೀರ್ತನೆ (ಮರಾಠಿಯಲ್ಲಿ). ದಯವಿಟ್ಟು ಗಮನಿಸಿ:– –1. ಆಸಕ್ತ ಭಕ್ತರು ಈ ಉತ್ಸವದಲ್ಲಿ ಭಾಗವಹಿಸಬಹುದು. 2. ಭಾಗವಹಿಸುವ ಭಕ್ತರು ಆಶ್ರಮಕ್ಕೆ ಮುಂಚಿತವಾಗಿ ಅವರ ಆಗಮನ ನಿರ್ಗಮನಗಳ ದಿನಾಂಕ ಮತ್ತು ಸಮಯ, ಗುಂಪಿನಲ್ಲಿ ಬರುತ್ತಿದ್ದರೆ ಅದರ ವಿವರಗಳು ಇವೆಲ್ಲವನ್ನೂ ತಪ್ಪದೆ ತಿಳಿಸಬೇಕು. 3. ಭಕ್ತರು ತಮ್ಮ ವಸತಿ ಮತ್ತು ಪ್ರಯಾಣದ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕು. 4. ಆಶ್ರಮದಲ್ಲಿ ಪ್ರಸಾದದ ವ್ಯವಸ್ಥೆಯನ್ನು ಮಾತ್ರ ಮಾಡಲಾಗುತ್ತದೆ.